ಆ) ರೂ. 2.41 ಲಕ್ಷಗಳಿಗೆ.

ಇ) ಇಲ್ಲ

ಈ) 1987–88 ರಲ್ಲಿ ಎನ್‌ಆರ್‌ಇಪಿ ಯೋಜನೆ ಯಡಿಯಲ್ಲಿ 0.52 ಲಕ್ಷ ರೂ. ಗಳನ್ನು ಹಾಗೂ 1990–91ರ ಕಾರ್ಯ ಯೋಜನೆಯಲ್ಲಿ ರೂ. 1.29 ಲಕ್ಷಗಳನ್ನು ಒದಗಿಸಿದೆ ಕಟ್ಟಡ ಕಾರ್ಯವು ಮೇಲ್ಛಾವಣಿಯ ಹಂತಕ್ಕೆ ಬಂದಿದ್ದು ಕೆಲಸವು ತ್ವರಿತಗತಿಯಿಂದ ನಡೆಯುತ್ತಿದೆ.

ಉ) ರೂ. 76,634.00 ಖರ್ಚಾಗಿದೆ.

ನೇಸರಗಿ ಗ್ರಾಮದಲ್ಲಿ ಪ್ರೌಢಶಾಲೆ ಕಟ್ಟಡ ಮಂಜೂರಾತಿ

296 ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ನೇಸರಗಿ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಕಟ್ಟಡ ಕಟ್ಟಲು ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ನೀಡಲಾಗುವುದು?

ಆ) ಎಷ್ಟು ಹಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ?

ಇ) ಈ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಕೆಲಸ ಮುಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಉ) ಏಪ್ರಿಲ್ 90 ರಿಂದ ಈ ಕೆಲಸಕ್ಕೆ ಖರ್ಚಾಗಿರುವ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯ್ಲಿ: (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) ದಿನಾಂಕ: 2–1–1987 ರಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಆ) ರೂ. 4.97 ಲಕ್ಷಗಳು

ಇ) ಹೌದು

ಈ) ಗುತ್ತಿಗೆದಾರರು ನಿಯಮಾವಳಿಗನುಸಾರ ಕಾಮಗಾರಿ [illegible] ಕಾರಣ ಕಾರ್ಯ ಸ್ಥಗಿತಗೊಂಡಿದ್ದು ಇವರನ್ನು ಬದಲಾಯಿಸಿ ಕಾನೂನು ಪ್ರಕಾರ ಬೇರೊಬ್ಬರಿಗೆ ಗುತ್ತಿಗೆ[illegible]ಲು ಕ್ರಮಕೈಗೊಳ್ಳಲಾಗುವುದು.

ಉ) ಅಕ್ಟೋಬರ್ 90ರ ಅಂತ್ಯದವರೆಗೆ ರೂ. 0.54 ಲಕ್ಷಗಳು.

ರಾಜ್ಯದಲ್ಲಿ ಕಾನೂನು ಬಾಹಿರವಾಗಿ ಆಕ್ರಮಿಸಿರುವ ಅರಣ್ಯ ಭೂಮಿ

291. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ರಾಜ್ಯದಲ್ಲಿ ಕಾನೂನು ಬಾಹಿರವಾಗಿ ಆಕ್ರಮಿಸಿರುವ ಅರಣ್ಯ ಭೂಮಿ ವಿಸ್ತೀರ್ಣ ಎಷ್ಟು?

ಆ) ಇದನ್ನು ಅರಣ್ಯ ಇಲಾಖೆಗೆ ವಾಪಸ್ಸು ಪಡೆಯಲು ಸರ್ಕಾರ ಯೋಚಿಸುತ್ತಿದೆಯೇ?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):–

ಅ) ರಾಜ್ಯದಲ್ಲಿ ಕಾನೂನು ಬಾಹಿರವಾಗಿ ಆಕ್ರಮಿಸಿರುವ ಅರಣ್ಯದ ವಿಸ್ತೀರ್ಣ ಸುಮಾರು 43,305.58 ಹೆಕ್ಟೇರು (ಜಿಲ್ಲಾವಾರು ಅಂಕಿ ಅಂಶ ಪಟ್ಟಿ ಲಗತ್ತಿಸಿದೆ).

ಆ) 1978 ಕ್ಕಿಂತ ಹಿಂದಿನ ಅತಿಕ್ರಮಣಗಳನ್ನು ಸಕ್ರಮಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ನಂತರದ ಅತಿಕ್ರಮಣದಾರರನ್ನು ಉಚ್ಚಾಟಿಸಲು ಕ್ರಮ ತೆಗೆದು ಕೊಳ್ಳಲಾಗಿದೆ.

ಅರಣ್ಯ ಭೂಮಿ ಅತಿಕ್ರಮಣದ ಜಿಲ್ಲಾವಾರು ಅಂಕಿ ಅಂಶಗಳ ವಿವರ ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1.	ಬೆಂಗಳೂರು	906.00
2.	ಬೆಳಗಾಂವ	2,299.22
3.	ಬಳ್ಳಾರಿ	3,420.00
4.	ಬೀದರ್	3,787.60
5.	ಬಿಜಾಪುರ	676.90
6.	ಚಿಕ್ಕಮಗಳೂರು	1,556.80
7.	ಚಿತ್ರದುರ್ಗ	1,190.16
8.	ಧಾರವಾಡ	351.33
9.	ದಕ್ಷಿಣ ಕನ್ನಡ	642.10
10.	ಗುಲ್ಬರ್ಗಾ	2,304.22
11.	ಹಾಸನ	420.00
12.	ಕೋಲಾರ	1,493.00
13.	ಕೊಡಗು	421.04
14.	ಮೈಸೂರು	1,443.79
15.	ಮಂಡ್ಯ	–
16.	ರಾಯಚೂರು	2,796.00
17.	ಶಿವಮೊಗ್ಗ	10,819.20
18.	ತುಮಕೂರು	232.20
19.	ಉತ್ತರ ಕನ್ನಡ	7,486.02
	ಒಟ್ಟು	43,305.58